# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ 106ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ದಿನಾಂಕ: 05-01-2026ರಂದು ಬೆಳಗ್ಗೆ 9.30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿ.**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಪ್ರೊ. ಎಸ್.ಜೆ.ಮಂಜುನಾಥ್ – ಸದಸ್ಯರು
4. ಡಾ. ಟಿ.ಆರ್.ಚಂದ್ರಶೇಖರ್ – ಸದಸ್ಯರು
5. ಶ್ರೀ ಕೆ.ಗೋಕುಲ್ ಗೋವರ್ಧನ್ – ಸದಸ್ಯರು
6. ಡಾ. ಹೆಚ್.ಎಂ.ಮಹೇಶ – ಸದಸ್ಯರು
7. ಡಾ. ಎಂ.ಪ್ರಭು – ಸದಸ್ಯರು
8. ಡಾ. ಪ್ರಿಯ ಮ್ಯಾಥ್ಯೂ – ಸದಸ್ಯರು
9. ಡಾ. ಕೆಂಪೇಗೌಡ ಬಿ.ಕೆ. – ಸದಸ್ಯರು
10. ಶ್ರೀ ಮಹದೇಶು – ಸದಸ್ಯರು
11. ಶ್ರೀ ನಾಗರಾಜು ಸಿ. – ಸದಸ್ಯರು
12. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
13. ಡಾ. ಶಿಲ್ಪ ಜೆ. – ಸದಸ್ಯರು
14. ಡಾ. ನಟರಾಜು ಹೆಚ್.ಎಸ್. – ಸದಸ್ಯರು
15. ಶ್ರೀ ಎಂ.ಶಂಕರ – ಸದಸ್ಯರು
16. ಡಾ. ಎನ್.ನಾಗರಾಜ, ಕುಲಸಚಿವರು (ಪರೀಕ್ಷಾಂಗ) – ಸದಸ್ಯರು
17. ಶ್ರೀಮತಿ ರೇಖಾ ಕೆ ಎಸ್, ಕೆ.ಎಸ್.ಎ.ಎಸ್. ಹಣಕಾಸು ಅಧಿಕಾರಿಗಳು – ವಿಶೇಷ ಆಹ್ವಾನಿತರು
18. ಶ್ರೀಮತಿ ಸವಿತಾ ಎಂ ಕೆ, ಕೆ.ಎ.ಎಸ್. ಕುಲಸಚಿವರು – ಸದಸ್ಯ ಕಾರ್ಯದರ್ಶಿ

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡವರುಗಳನ್ನು ಪರಿಚಯಿಸಿ ಸ್ವಾಗತಿಸಿದರು.

1. ಡಾ. ಎಂ.ಪ್ರಭು, ಪ್ರಾಂಶುಪಾಲರು, ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಊಟಿ ರಸ್ತೆ, ಮೈಸೂರು
2. ಡಾ. ಪ್ರಿಯ ಮ್ಯಾಥ್ಯೂ, ಪ್ರಾಂಶುಪಾಲರು, ಸೆಂಟ್ ಜೋಸೆಫ್ ಶಿಕ್ಷಣ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು
3. ಡಾ. ಕೆಂಪೇಗೌಡ ಬಿ.ಕೆ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು

ಹಾಗೂ

ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಡಾ. ಟಿ.ಬಿ.ಮಹೇಶ, ಪ್ರಾಂಶುಪಾಲರು, ವಾತ್ಸಲ್ಯ ಶಿಕ್ಷಣ ಕಾಲೇಜು, ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ, ಮೈಸೂರು
2. ಡಾ. ಬಿ.ಆರ್.ಜಯಕುಮಾರಿ, ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಮೈಸೂರು
3. ಡಾ. ಎಂ.ಪುಷ್ಪವತಿ, ನಿರ್ದೇಶಕರು, ಅಖಿಲ ಭಾರತೀಯ ವಾಕ್ ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

ತದನಂತರ ಮಾನ್ಯ ಕುಲಪತಿಗಳು ಸಿಂಡಿಕೇಟ್ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿದರು ಮತ್ತು ಚರಿತ್ರಾರ್ಹವಾದ ಮೈಸೂರು ವಿಶ್ವವಿದ್ಯಾನಿಲಯದ 106ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಮತ್ತು ವಿವಿಧ ಕೋರ್ಸುಗಳ ಪದವಿಗಳನ್ನು ಪ್ರದಾನಿಸುವ ಸಲುವಾಗಿ ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ವಿಶೇಷ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

| | |
|---|---|
| ವಿಷಯ ಸಂಖ್ಯೆ: 1.1 | 106ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅರ್ಹತಾ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | **ವಿವಿಧ ಪದವಿಗಳನ್ನು 106ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನಿಸುವ ಸಲುವಾಗಿ ಮಂಡಿಸಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿಂಡಿಕೇಟ್ ವಿಶೇಷ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ ಸಂಖ್ಯೆ: 1.2 | 106ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ. |
| | ಶ್ರೀ ಮಹದೇಶು ಇವರು ಮಾತನಾಡಿ, 106ನೇ ವಾರ್ಷಿಕ ಘಟಿಕೋತ್ಸವದಲ್ಲಿ (1) ಶ್ರೀ. ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಪ್ರಖ್ಯಾತ ಕನ್ನಡ ಚಲನಚಿತ್ರ ನಿರ್ದೇಶಕರು ಮತ್ತು ನಿರ್ಮಾಪಕರು (2) ಡಾ. ಟಿ. ಶಾಮ್ ಭಟ್, ಸಾರ್ವಜನಿಕ ಆಡಳಿತ ಸೇವಾ ಧುರೀಣರು ಮತ್ತು (3) ಶ್ರೀ. ಪಿ ಜಯಚಂದ್ರರಾಜು, ಶಿಕ್ಷಣ ತಜ್ಞರು ಹಾಗೂ ಪರಿಸರವಾದಿಗಳು, ಇವರುಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಘನತೆವೆತ್ತ ಕುಲಾಧಿಪತಿಗಳು ಅಂಕಿತಗೊಳಿಸಿರುವ ಪಟ್ಟಿಗೆ ಆಕ್ಷೇಪಣೆ ವ್ಯಕ್ತಪಡಿಸಿ, ಸದರಿ ಪಟ್ಟಿಗೆ ತಮ್ಮ ಅಸಮ್ಮತಿ ಇದೆ ಎಂದು ತಿಳಿಸುತ್ತಾ, ಕಳೆದ ಮೈಸೂರು ವಿಶ್ವವಿದ್ಯಾನಿಲಯದ ಮೂರು ಘಟಿಕೋತ್ಸವ ನಡೆಯುವ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ನೀಡುವ ಸಂಬಂಧ ಸಾಧಕರುಗಳ ಹೆಸರುಗಳನ್ನು ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಲಿಖಿತ ರೂಪದಲ್ಲಿ |

| | |
|---|---|
| | ಸಲ್ಲಿಸಿರುತ್ತೇವೆ. ಸದರಿ ಮನವಿಯಲ್ಲಿ ತಿಳಿಸಿರುವ ಯಾವೊಬ್ಬ ಸಾಧಕರ ಹೆಸರನ್ನು ಗೌರವಾನ್ವಿತ ಕುಲಾಧಿಪತಿಗಳು ಗೌರವ ಡಾಕ್ಟರೇಟ್ ಪದವಿಗೆ **ಪರಿಗಣಿಸದೇ** ಇರುವುದರ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.<br><br>ಶ್ರೀ ಮಹದೇಶು ಅವರ ಆಕ್ಷೇಪಣೆಗೆ ಶ್ರೀ ನಾಗರಾಜು ಸಿ., ಡಾ. ನಟರಾಜು ಹೆಚ್.ಎಸ್., ಡಾ.ಶಿಲ್ಪ ಜೆ ಮತ್ತು ಶ್ರೀ ಎಂ.ಶಂಕರ ಇವರುಗಳು ಸಹ ಸಹಮತವನ್ನು ಸೂಚಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳು ಶಿಫಾರಸ್ಸು ಮಾಡಿರುವ ಪಟ್ಟಿಯನ್ನು ಸನ್ಮಾನ್ಯ ಕುಲಾಧಿಪತಿಗಳಿಗೆ ಸಲ್ಲಿಸಿದ್ದು, ಸನ್ಮಾನ್ಯ ಕುಲಾಧಿಪತಿಗಳಿಂದ ಈ ಮೇಲೆ ತಿಳಿಸಿರುವ ಮೂವರು ಖ್ಯಾತನಾಮರುಗಳ ಹೆಸರುಗಳನ್ನು ಅಂಕಿತಗೊಳಿಸಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>106ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವಾನ್ವಿತ ಕುಲಾಧಿಪತಿಗಳಿಂದ ಅಂಕಿತಗೊಂಡು ಗೌರವ ಡಾಕ್ಟರೇಟ್ ಪಡೆಯುತ್ತಿರುವ ಮೂವರು ಗಣ್ಯರ ಪಟ್ಟಿಗೆ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಮಹದೇಶು, ಶ್ರೀ ನಾಗರಾಜು ಸಿ., ಡಾ. ನಟರಾಜು ಹೆಚ್.ಎಸ್, ಡಾ.ಶಿಲ್ಪ ಜೆ., ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಮತ್ತು ಶ್ರೀ ಎಂ.ಶಂಕರ ಇವರುಗಳು ಆಕ್ಷೇಪಣೆ ವ್ಯಕ್ತಪಡಿಸಿ ಅಸಮ್ಮತಿ ಪತ್ರಗಳನ್ನು ಸಲ್ಲಿಸಿರುತ್ತಾರೆ.<br><br>ಕುಲಸಚಿವರು ಮಾತನಾಡಿ, ಅಸಮ್ಮತಿ ಪತ್ರಗಳನ್ನು ಕಾನೂನಾತ್ಮಕವಾಗಿ ಪರಿಗಣಿಸಿ ಇತ್ಯರ್ಥಪಡಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **ಮಾನ್ಯ ಕುಲಾಧಿಪತಿಗಳ ಕಾರ್ಯದರ್ಶಿಯವರ ಪತ್ರ ಸಂಖ್ಯೆ: GS 07 MUM 2025 ದಿನಾಂಕ 23-12-2025ರ ಆದೇಶದನ್ವಯ 106ನೇ ವಾರ್ಷಿಕ ಘಟಿಕೋತ್ಸವದಲ್ಲಿ (1) ಶ್ರೀ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಪ್ರಖ್ಯಾತ ಕನ್ನಡ ಚಲನಚಿತ್ರ ನಿರ್ದೇಶಕರು ಮತ್ತು ನಿರ್ಮಾಪಕರು (2) ಡಾ. ಟಿ. ಶಾಮ್ ಭಟ್, ಸಾರ್ವಜನಿಕ ಆಡಳಿತ ಸೇವಾ ಧುರೀಣರು ಮತ್ತು (3) ಶ್ರೀ. ಪಿ ಜಯಚಂದ್ರರಾಜು, ಶಿಕ್ಷಣ ತಜ್ಞರು ಹಾಗೂ ಪರಿಸರವಾದಿಗಳು, ಇವರುಗಳಿಗೆ ಗೌರವ ಡಾಕ್ಟರೇಟ್ (D.Litt.) ಪದವಿ ಪ್ರದಾನ ಮಾಡಲು ಕುಲಾಧಿಪತಿಗಳು ಅನುಮೋದಿಸಿರುವುದನ್ನು ಸಿಂಡಿಕೇಟ್ ವಿಶೇಷ ಸಭೆಯು ಅನುಸಮರ್ಥಿಸಿತು.** |

ಅಂತಿಮವಾಗಿ ಮಾನ್ಯ ಕುಲಪತಿಯವರು ಎಲ್ಲರಿಗೂ ವಂದಿಸಿ, 106ನೇ ವಾರ್ಷಿಕ ಘಟಿಕೋತ್ಸವದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಲು ಎಲ್ಲಾ ಸದಸ್ಯರುಗಳು ಸಹಕರಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ**

**ಕುಲಪತಿಗಳು ಹಾಗೂ ಅಧ್ಯಕ್ಷರು**